# ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆಬಿ1/ಬಿಯುಡಿ/ಸಿಆರ್-8/2018-19

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅಭಿವೃದ್ಧಿ) ರವರ ಕಛೇರಿ, "ಅರಣ್ಯ ಭವನ",
ಬೆಂಗಳೂರು, ದಿನಾಂಕ: 23-05-2019.
ದೂರವಾಣಿ ಸಂ: 080-23342827
E-mail ID: apccfdevelopment@gmail.com

ಇವರಿಗೆ,

ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ,

ಮಾನ್ಯರೆ,

ವಿಷಯ: ಸಮರ್ಥ ಭಾರತ ಟ್ರಸ್ಟ್, ರಾಜ್ಯಾದ್ಯಂತ ಹಮ್ಮಿಕೊಂಡಿರುವ ಕೋಟಿ ವೃಕ್ಷ ಅಭಿಯಾನಕ್ಕೆ ಸಸಿಗಳನ್ನು ಒದಗಿಸಲು ಮನವಿ.

ಉಲ್ಲೇಖ: ಶ್ರೀ ಚೈತನ್ಯ ಅಲಬೂರ, ಸಮರ್ಥ ಭಾರತ ಟ್ರಸ್ಟ್, ಬೆಂಗಳೂರು ಇವರ ಮನವಿ ದಿನಾಂಕ: 22-05-2019.

* * * * *

ಉಲ್ಲೇಖಿತ ಮನವಿಯ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ ತಿಳಿಸುವುದೇನೆಂದರೆ, ಸಮರ್ಥ ಭಾರತ ಟ್ರಸ್ಟ್, ಬೆಂಗಳೂರು ಇವರು ಜೂನ್ 5 2019ರ ವಿಶ್ವ ಪರಿಸರ ದಿನಾಚರಣೆಯ ದಿನದಿಂದ ಆಗಸ್ಟ್ 15 ರವರೆಗಿನ ಅವಧಿಯಲ್ಲಿ ರಾಜ್ಯಾದ್ಯಂತ ಒಂದು ಕೋಟಿಗೂ ಹೆಚ್ಚು ಸಸಿಗಳನ್ನು ನೆಡುವ ಯೋಜನೆಯನ್ನು ಹಮ್ಮಿಕೊಂಡಿದ್ದು ಈ ಕಾರ್ಯಕ್ರಮಕ್ಕೆ ಅವಶ್ಯವಿರುವ ಗಿಡಗಳನ್ನು ಒದಗಿಸುವಂತೆ ಕೋರಿರುತ್ತಾರೆ.

ಆದ್ದರಿಂದ ಇಲಾಖಾವತಿಯಿಂದ ಕೈಗೊಳ್ಳಲಾಗುವ ವಿಶ್ವ ಪರಿಸರ ದಿನಾಚರಣೆ, ವನಮಹೋತ್ಸವ ಹಾಗೂ ಬೀಜದ ಉಂಡೆಯ ಬಿತ್ತನೆ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಸದರಿಯವರಿಗೆ ಸೂಚಿಸಲಾಗಿದೆ.

ಮುಂದುವರಿದು ಅವರು ಬಯಸಿದ ಸ್ಥಳದಲ್ಲಿ ಗಿಡಗಳನ್ನು ನೆಡಲು ಮತ್ತು ಸೀಡ್‌ಬಾಲ್‌ಗಳನ್ನು ಬಿತ್ತನೆ ಮಾಡಲು ಉದ್ದೇಶಿಸಿದಲ್ಲಿ ಅವರಿಂದ ಸಸಿ ನೆಡುವ ಹಾಗೂ ಬೀಜದ ಉಂಡೆ ಬಿತ್ತನೆ ಮಾಡುವ ಸ್ಥಳಗಳ ವಿವರ ಪಡೆದು ನಿಯಮಾನುಸಾರ ರಿಯಾಯಿತಿ ದರದಲ್ಲಿ ಸಸಿಗಳನ್ನು ಪೂರೈಕೆ ಮಾಡಲು ಸೂಚಿಸಿದೆ. ಈ ಕುರಿತು ಕೈಗೊಂಡ ಕ್ರಮದ ಬಗ್ಗೆ ಈ ಕಛೇರಿಗೆ ವರದಿ ಸಲ್ಲಿಸುವುದು.

ತಮ್ಮ ನಂಬುಗೆಯ,

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅಭಿವೃದ್ಧಿ), ಬೆಂಗಳೂರು.

1. ಪ್ರತಿಯನ್ನು ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸುತ್ತಾ ಮೇಲೆ ಪ್ರಸ್ತಾಪಿಸಲಾದ ವಿಷಯದ ಬಗ್ಗೆ ಕ್ರಮ ಕೈಗೊಂಡು ವರದಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಲ್ಲಿಸಿ ಈ ಕಛೇರಿಗೆ ಪ್ರತಿ ಸಲ್ಲಿಸುವುದು.
2. ಪ್ರತಿಯನ್ನು ಮೆ:ಸಮರ್ಥ ಭಾರತ ಟ್ರಸ್ಟ್, ನಂ:8/28, ಬುಲ್ ಟೆಂಪಲ್ ರೋಡ್, ಬಸವನಗುಡಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸುತ್ತಾ ಇಲಾಖಾವತಿಯಿಂದ ಕೈಗೊಳ್ಳಲಾಗುವ ವಿಶ್ವ ಪರಿಸರ ದಿನಾಚರಣೆಯ ಹಾಗೂ ಬೀಜದ ಉಂಡೆಯ ಬಿತ್ತನೆ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಕೋರುತ್ತಾ ಈ ಸಂಬಂಧ ಆಯಾ ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳನ್ನು ಸಂಪರ್ಕಿಸಲು ಕೋರಿದೆ.